ಆರ್‌ಬಿಐ/2006–07/48

ಉಲ್ಲೇಖ: ಡಿಪಿಎಸ್‌ಎಸ್ (ಸಿಒ) ನಂ 5/04.01.01/2006–07 ಜುಲೈ 4, 2006

**ವಿದ್ಯುನ್ಮಾನ ತೀರುವಳಿ ಸೇವೆಯಲ್ಲಿ (ಡೆಬಿಟ್ ತೀರುವಳಿ) ಭಾಗವಹಿಸುತ್ತಿರುವ ಎಲ್ಲ ಬ್ಯಾಂಕುಗಳಿಗೆ**

**ವಿದ್ಯುನ್ಮಾನ ತೀರುವಳಿ ಸೇವೆ– ಡೆಬಿಟ್ ತೀರುವಳಿ–ಗ್ರಾಹಕನ ಆಜ್ಞೆಗಳು**

ಇಸಿಎಸ್ ಅಡಿಯಲ್ಲಿ ವ್ಯವಹಾಗಳು ತೀವ್ರವಾಗಿ ಹೆಚ್ಚುತ್ತಿರುವ ಸಂಗತಿ ತಮಗೆಲ್ಲ ತಿಳಿದೇ ಇದೆ. ಡೆಬಿಟ್ ತೀರುವಳಿ ವ್ಯವಹಾರಗಳ ಬೆಳವಣಿಗೆಯ ಗತಿಯು ಜಮೆ ತೀರುವಳಿಗಿಂತ ಹೆಚ್ಚಾಗಿದ್ದು, ಅನೇಕ ಯುಟಿಲಿಟಿ ಕಂಪನಿಗಳು/ ಬ್ಯಾಂಕುಗಳು ಯುಟಿಲಿಟಿ ಸಂದಾಯಗಳು, ಇಎಂಐಗಳು, ಮುಂತಾದವುಗಳಿಗೆ ಸಂಬಂಧಪಟ್ಟ ಬಿಲ್ಲುಗಳ ಸಂಗ್ರಹಣೆಗಾಗಿ ಈ ವ್ಯವಸ್ಥೆಯನ್ನು ಬಳಸಿಕೊಳ್ಳುತ್ತಿವೆ.

2. ಉದ್ದಿಷ್ಟ ಸ್ಥಳದಲ್ಲಿರುವ ಖಾತೆದಾರರು ತಮ್ಮ ಲೆಕ್ಕದಲ್ಲಿರುವ ಹಣವನ್ನು ವಿನಿಯೋಗಕ್ಕಾಗಿ ಬಳಕೆದಾರ ಸಂಸ್ಥೆಗಳಿಗೆ ನೀಡಿದ ಆಜ್ಞೆಗಳ ಬಲದ ಮೇಲೆ ಇಸಿಎಸ್ (ಡೆಬಿಟ್) ಕೆಲಸ ಮಾಡುತ್ತದೆ. ಖಾತೆದಾರನು ಅಥವಾ ಬಳಕೆದಾರ ಸಂಸ್ಥೆಯು ಬ್ಯಾಂಕಿಗೆ ಆಜ್ಞೆಯ ಒಂದು ಪ್ರತಿಯನ್ನು, ಆ ಬ್ಯಾಂಕು ಇಸಿಎಸ್ (ಡೆಬಿಟ್ ತೀರುವಳಿ) ಮೂಲಕ ಪಡೆದ ಡೆಬಿಟ್ ಸೂಚನೆಯ ಸಿಂಧುತ್ವವನ್ನು ಪರಿಶೀಲಿಸಲು ಕಳುಹಿಸಿಕೊಡುತ್ತಾನೆ/ಕೊಡುತ್ತದೆ.

3. ಆರ್‌ಬಿಐ ಇತ್ತಿಚೆಗೆ ನಡೆಸಿದ ಅನೌಪಚಾರಿಕ ಸಮೀಕ್ಷೆಯಿಂದ ಅನೇಕ ಬ್ಯಾಂಕ್ ಶಾಖೆಗಳು ಅಗತ್ಯ ಆಜ್ಞಾಪಕ ನಮೂನೆಗಳನ್ನು ಯುಕ್ತ ಕ್ರಮದಲ್ಲಿ ಇಟ್ಟುಕೊಂಡು ಬಂದಿಲ್ಲವೆಂಬ ಅಂಶ ಬಹಿರಂಗವಾಗಿದೆ. ಅವು ವಾಡಿಕೆಯಂತೆ ತೀರುವೆ ಕೇಂದ್ರದಿಂದ ಸ್ವೀಕರಿಸಿದ ಇಸಿಎಸ್ (ಡೆಬಿಟ್) ಕಡತದ ಆಧಾರದ ಮೇಲೆಯೇ ಡೆಬಿಟ್‌ಗಳನ್ನು ಮಾಡುತ್ತವೆ. ಬ್ಯಾಂಕ್ ಶಾಖೆಗಳು ತಾವು ಬಳಸುತ್ತಿರುವ ತಂತ್ರಾಂಶ(ಸಾಫ್ಟ್‌ವೇರ್) ದಲ್ಲಿ ಇಸಿಎಸ್ (ಡೆಬಿಟ್) ಆಜ್ಞಾಪನೆಯನ್ನು ದಾಖಲು ಮಾಡುವ ವ್ಯವಸ್ಥೆ ಇಲ್ಲವೆಂದು ಸಹ ಸೂಚಿಸಿವೆ. ಲಭ್ಯವಿದ್ದರೂ ಒಂದು ಅಥವಾ ಎರಡು ಆಜ್ಞಾಪನೆಗಳಿಗೆ ಮಾತ್ರ ಅದು ಸೀಮಿತವಾಗಿದೆ. ಕೆಲವು ಖಾತೆದಾರರು ಇಸಿಎಸ್ ಮೂಲಕ ಡೆಬಿಟ್ ಪಡೆಯುವುದಕ್ಕಾಗಿ ಹಲವಾರು ಯುಟಿಲಿಟಿ ಸಂಸ್ಥೆಗಳಿಗೆ ಆಜ್ಞಾಪನೆಗಳನ್ನು ನೀಡಿರುತ್ತಾರೆ.

4. ಈ ಸಂಬಂಧದಲ್ಲಿ, ಡೆಬಿಟ್ ಆಜ್ಞಾಪನೆಯ ನಿರ್ವಹಣಾ ವ್ಯವಸ್ಥೆಯು ಬ್ಯಾಂಕಿನ ಆಂತರಿಕ ನಿರ್ವಹಣಾ ಕಾರ್ಯದ ಒಂದು ಭಾಗವಾಗಿರಬೇಕಾಗುತ್ತದೆ ಎಂದು ಹೇಳಬಹುದು. ಆಜ್ಞಾಪನೆಯು ಸಿಂಧುತ್ವದ ಅವಧಿ ಮತ್ತು ವ್ಯಕ್ತಿಗತ ವ್ಯವಹಾರದ ಗರಿಷ್ಠ ಮಿತಿಯನ್ನು ಸಹ ಒಳಗೊಂಡಿರಬಹುದು. ಗರಿಷ್ಠ ಮಿತಿಯು ಒಂದು ಆಜ್ಞಾಪನೆಯಿಂದ ಇನ್ನೊಂದು ಆಜ್ಞಾಪನೆಗೆ ವ್ಯತ್ಯಾಸವಾಗಬಹುದು. ಸುತ್ತೋಲೆ ಡಿಪಿಎಸ್‌ಎಸ್ (ಸಿಒ) ಸಂಖ್ಯೆ. 950/04.01.01/2005–06 ದಿನಾಂಕ ಡಿಸೆಂಬರ್ 23, 2005ರ ಪ್ರಕಾರ ಒಬ್ಬ ಗ್ರಾಹಕನ ಹಣ ತೆಗೆಯುವ ಸೂಚನೆಯನ್ನು ಚೆಕ್ ತೀರುವಳಿ ಪದ್ಧತಿಯಲ್ಲಿ ಸಂದಾಯ ನಿಲುಗಡೆ ಸೂಚನೆಗೆ ಸಮಾನವಾಗಿ ಪರಿಗಣಿಸಬೇಕಾಗುತ್ತದೆ. ಆದ್ದರಿಂದ, ಆಜ್ಞಾಪನೆಗಳು ಮತ್ತು ಹಣ ತೆಗೆಯುವಿಕೆಗಳು ಯಾವುವಾದರೂ ಇದ್ದರೆ, ಅವುಗಳನ್ನು ದಾಖಲಿಸುವಾಗ ಸಾಕಷ್ಟು ಎಚ್ಚರ ವಹಿಸಲಾಗಿದೆಯೆಂಬುದನ್ನು ಖಚಿತಪಡಿಸಿಕೊಳ್ಳಬೇಕಾಗುತ್ತದೆ.

5. ನಿಮ್ಮ ಬ್ಯಾಂಕು, ಸಾಧ್ಯವಾದಷ್ಟು ಬೇಗ, ಇಸಿಎಸ್ (ಡೆಬಿಟ್) ವ್ಯವಹಾರಗಳ ನಿರ್ವಹಣೆಗಾಗಿ ಒಂದು ಸೂಕ್ತ ಆಜ್ಞಾಪಕ ವ್ಯವಸ್ಥಾಪನೆಯ ಪದ್ಧತಿಯನ್ನು ಸೇರಿಸಲು ಕ್ರಮ ಪ್ರಾರಂಭಿಸಬೇಕೆಂದು ಕೋರುತ್ತೇವೆ.

ಈ ಪತ್ರ ತಲುಪಿದ್ದಕ್ಕೆ ದಯವಿಟ್ಟು ಸ್ವೀಕೃತಿ ನೀಡಿ ಮತ್ತು ಅದರ ಪಾಲನೆಯಾಗುವಂತೆ ನೋಡಿಕೊಳ್ಳಿ.

ತಮ್ಮ ವಿಶ್ವಾಸಿ,

**ಕೆ. ಎನ್. ಕೃಷ್ಣ ಮೂರ್ತಿ,**
ಪ್ರಧಾನ ವ್ಯವಸ್ಥಾಪಕ.